ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 22ನೇ ಸೆಪ್ಟಂಬರ್, 2020

ಚನ್ನರಾಯಪಟ್ಟಣ ತಾಲ್ಲೂಕಿನ ರಾಯಸಂದ್ರುದಲ್ಲಿನ ಗಣಿಗಾರಿಕೆಯಿಂದಾಗಿರುವ ತೊಂದರೆಗಳ ಬಗ್ಗೆ

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

171 (164) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ರಾಯಸಂದ್ರ ಕಾವಲು ಅಮೃತ್ ಮಹಲ್‌ಗೆ ಸೇರಿದ ಎಷ್ಟು ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಯು ಗುತ್ತಿಗೆಗೆ ಪಡೆದಿದೆ;

(ಆ) ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಯು ಯಾವಾಗ, ಯಾವ ಮಾರ್ಗಸೂಚಿಗಳನ್ವಯ ಮತ್ತು ಎಷ್ಟು ವರ್ಷಗಳಿಗೆ ಪಡೆದಿದೆ; (ಸರ್ಕಾರದ ಆದೇಶಗಳನ್ನು ನೀಡುವುದು)

(ಇ) ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಯು ಪಡೆಯುವಾಗ ಪಶುಸಂಗೋಪನೆ ಇಲಾಖೆಯು ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳೇನು; (ವಿವರ ನೀಡುವುದು)

(ಈ) ಗುತ್ತಿಗೆ ಅವಧಿ ಮುಗಿದ ಮೇಲೆ ಗಣಿಗಾರಿಕೆಯಿಂದ ಈ ಜಮೀನಿನಲ್ಲಿ ಉಂಟಾಗಿರುವ ಗುಂಡಿ, ಕೊರಕಲು ಪ್ರದೇಶಗಳನ್ನು ಸರಿಮಾಡಿಕೊಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಉ) ಸದರಿ ಜಮೀನಿನಲ್ಲಿ ಗಣಿಗಾರಿಕೆ ನಡೆಸುತ್ತಿರುವುದರಿಂದ ರಾಯಸಂದ್ರ ಕಾವಲಿನಲ್ಲಿ ತಳಿ ಸಂವರ್ಧನೆ ಕಾರ್ಯಗಳನ್ನು ಕೈಗೊಳ್ಳಲು ಮತ್ತು ರಾಸುಗಳ ಬೆಳವಣಿಗೆಗೆ ಮತ್ತು ಇತರೆ ಪೂರಕ ಚಟುವಟಿಕೆಗಳಿಗೆ ತೊಂದರೆಗಳಾಗಿವೆಯೇ? (ವಿವರ ನೀಡುವುದು)